01

# ಮೈಸೂರು ವಿಶ್ವವಿದ್ಯಾನಿಲಯ

(ಸ್ಥಾಪನೆ-1916)
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್ಐಆರ್ಎಫ್-2022 ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570 005,

ಸಂಖ್ಯೆ:ಪ.ವಿ.3.5/ಇತರೆ/2022-23 ದಿನಾಂಕ: 02-12-2022

## ಸುತ್ತೋಲೆ

ವಿಷಯ: ಆಂತರಿಕ (C1, C2) ಅಂಕಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಕಾಲಾವಕಾಶವನ್ನು ನೀಡಿರುವ ಬಗ್ಗೆ.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷವು ನಡೆಯುವ ಸ್ನಾತಕ ಪದವಿ ಪರೀಕ್ಷೆಗಳ ಸಂಬಂಧ ಆಂತರಿಕ (C1, C2) ಅಂಕಗಳಲ್ಲಿ ಏನಾದರೂ ಲೋಪದೋಷಗಳಿದ್ದಲ್ಲಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡ ಮೂರು ತಿಂಗಳ ಒಳಗಾಗಿ ದಂಡ ಶುಲ್ಕದೊಂದಿಗೆ ಸರಿಪಡಿಸಿಕೊಳ್ಳಲು ಕಾಲಾವಕಾಶವನ್ನು ನೀಡಲಾಗಿದ್ದು, ನಂತರ ವಿದ್ಯಾರ್ಥಿಗಳಿಂದ/ಕಾಲೇಜಿನಿಂದ ಬರುವ ಯಾವುದೇ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ವೆಂದು ಈ ಮೂಲಕ ತಿಳಿಸಲಾಗಿದೆ. ಈ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

"ಕರಡು ಕುಲಸಚಿವ (ಪರೀಕ್ಷಾಂಗ) ಅವರಿಂದ ಅನುಮೋದಿಲ್ಪಟ್ಟಿದೆ."

ಸಹಾಯಕ ಕುಲಸಚಿವರು(ಪರೀಕ್ಷಾಂಗ)

ಗೆ,

1. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಟ್ಟ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,
2. ಕುಲಸಚಿವರು(ಪರೀಕ್ಷಾಂಗ)ರವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸಹಾಯಕ ಕುಲಸಚಿವರು(ಪರೀಕ್ಷಾಂಗ)/ಅಧೀಕ್ಷಕರು/ಕಾರ್ಯನಿರ್ವಾಹಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣಾ ವಿಭಾಗ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರಾಜೆಕ್ಟ್ ಮ್ಯಾನೇಜರ್, ಮೆಟಾ-ಐ ಸಂಸ್ಥೆ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕಛೇರಿ ಪ್ರತಿ.

ದೂರವಾಣಿ: ಖಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301
e-mail: registrar@uni-mysore.ac.in
www.uni-mysore.ac.in

REGISTRAR (Evaluation)
UNIVERSITY OF MYSORE
MYSORE
03 APR 2017
Ser. No. ........
Regn. No. 47 ........

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ವಿಷಯ: ಅಂತರಿಕ ಅಂಕಗಳು ಹಾಗೂ ಇತರ ಪರೀಕ್ಷಾ ಕಾರ್ಯನಿರ್ವಹಿಸುವಂತಹ ಸಂದರ್ಭದಲ್ಲಿ ಲೋಪ ವೆಸಗುವ ವ್ಯಕ್ತಿಗಳಿಗೆ/ಕಾಲೇಜುಗಳಿಗೆ ದಂಡ ವಿಧಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ: 07.02.2017ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ
2. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಟಿಪ್ಪಣಿ ಸಂಖ್ಯೆ: ಪವಿ.3.5/ಬಿ.ಕಾಂ/2016-17, ದಿನಾಂಕ: 15.03.2017.
3. ಈ ಕಛೇರಿ ಆದೇಶ ಸಂಖ್ಯೆ: ಜಿಎಲ್5/ಯುಎ-1/318/1992-93 ದಿನಾಂಕ: 05.12.2008ರ ಕ್ರಮ ಸಂಖ್ಯೆ 20.

-:-

**ಆದೇಶ ಸಂಖ್ಯೆ ಜಿಎಲ್5/142/2012-13 ದಿನಾಂಕ 30.03.2017**

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, ಹಾಗೂ ದಿನಾಂಕ: 07.02.2017ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಪರೀಕ್ಷಾ ಫಲಿತಾಂಶ ಪ್ರಕಟಗೊಂಡ ನಂತರ ಆಂತರಿಕ ಅಂಕಗಳನ್ನು (Internal Assessment) ತಿದ್ದುಪಡಿ ಮಾಡುವಲ್ಲಿ ಎಸಗುವ ಲೋಪಗಳಿಗೆ ವಿಧಿಸುವ ದಂಡ ಶುಲ್ಕವನ್ನು ಹಾಲಿ ಇರುವ ರೂ.100/-ಗಳಿಂದ ರೂ.500/-ಗಳಿಗೆ ಪರಿಷ್ಕರಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರಿಂದ ಕರಡು ಅನುಮೋದಿಸಿದೆ

ಸಹಾಯಕ ಕುಲಸಚಿವ (ಸಾಮಾನ್ಯ)
30-3-17

ಇವರಿಗೆ:
1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದ/ಅಧೀನಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಹಾಸನ, ಮಂಡ್ಯ, ಚಾಮರಾಜನಗರ,
4. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಸರ್ಕಾರಿ ಲೆಕ್ಕಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
7. ಉಪಕುಲಸಚಿವರು(ಸಾಮಾನ್ಯ)/ಪ್ರಾಧಿಕಾರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಮೈವಿವಿ, ಮೈಸೂರು
9. ಕಛೇರಿ ಪ್ರತಿ.

ಸು. gl5 Order

# ಮೈಸೂರು ವಿಶ್ವವಿದ್ಯಾನಿಲಯ

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಮೈಸೂರು-570 005

ಸಂಖ್ಯೆ: ಪ.ವಿ. ಆರ್.ವಿ/2020-21 ದಿನಾಂಕ:. 08-05-2020

## ಕಛೇರಿ ಆದೇಶ

**ವಿಷಯ:** ಅಜಾಗರೂಕತೆಯಿಂದ ಮೌಲ್ಯಮಾಪನ ಮಾಡುವ ಮೌಲ್ಯಮಾಪಕರುಗಳಿಗೆ ವಿಧಿಸುವ ದಂಡವನ್ನು ಪರಿಷ್ಕರಿಸಿರುವ ಬಗ್ಗೆ.

**ಉಲ್ಲೇಖ:** ದಿನಾಂಕ: 23-03-2020 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳ.

**~**~**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಲೋಪವೆಸಗುವ ಮೌಲ್ಯಮಾಪಕರುಗಳಿಗೆ ಪ್ರತಿ ತಪ್ಪಿಗೆ ರೂ. 500/- ದಂಡ ವಿಧಿಸಲಾಗುತ್ತಿತ್ತು. ಈ ಸಂಬಂಧವಾಗಿ ದಿನಾಂಕ: 23-03-2020 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ, ಮೌಲ್ಯಮಾಪಕರು ಜಾಗರೂಕರಾಗಿರಲು ಹಾಗೂ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಲು ಇನ್ನು ಮುಂದೆ ವಿಧಿಸಬಹುದಾದ ದಂಡದ ಮಾದರಿಯನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.

1. ಮೊದಲ ಬಾರಿಗೆ ತಪ್ಪೆಸಗುವ ಮೌಲ್ಯಮಾಪಕರುಗಳಿಗೆ ವಿಧಿಸಲಾಗುವ ಧಂಡ ಪ್ರತಿ ತಪ್ಪಿಗೆ ರೂ. 1,000/-.
2. ಎರಡನೇ ಬಾರಿಗೆ ತಪ್ಪೆಸಗುವ ಮೌಲ್ಯಮಾಪಕರುಗಳಿಗೆ ವಿಧಿಸಲಾಗುವ ದಂಡ ಪ್ರತಿ ತಪ್ಪಿಗೆ ರೂ. 2,000/-.
3. ಮೂರನೇ ಬಾರಿಗೆ ತಪ್ಪೆಸಗಿದಲ್ಲಿ ಮೌಲ್ಯಮಾಪಕರನ್ನು ಕಪ್ಪು ಪಟ್ಟಿಗೆ (Black List) ಸೇರಿಸಿ, ಒಂದು ವರ್ಷದ ಅವಧಿಗೆ ಮೌಲ್ಯಮಾಪನ ಕಾರ್ಯದಿಂದ ಹೊರಗಿಡಲಾಗುವುದು.

8/5/2020
ಕುಲಸಚಿವ(ಪರೀಕ್ಷಾಂಗ)

ಪ್ರತಿ,

1. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಉಪ ಕುಲಸಚಿವರು(ಪರೀಕ್ಷಾಂಗ)/ಸಹಾಯಕ ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಮಾನ್ಯ ಕುಲಪತಿಗಳವರ/ಕುಲಸಚಿವರ/ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕಛೇರಿ ಪ್ರತಿ.

# UNIVERSITY OF MYSORE

## EXTRACT FROM THE PROCEEDINGS OF THE ORDINARY/~~SPECIAL~~ MEETING OF THE SYNDICATE / ~~ACADEMIC COUNCIL~~ HELD ON 18-09-2017

Subject No. 2017/9.6

ವಿಷಯ: ವಿಶೇಷ ದಂಡಶುಲ್ಕಗಳನ್ನು ನಿಗದಿ ಪಡಿಸುವ ಬಗ್ಗೆ.

*****

DR 9.5

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಸಂಶೋಧನೆಗೆ ನೊಂದಣಿ ಮಾಡಿಸಿ ಸಂಶೋಧನೆಯಲ್ಲಿ ನಿರತರಾಗಿರುವ ಕೆಲವು ಅಭ್ಯರ್ಥಿಗಳು ಅನಿವಾರ್ಯ ಕಾರಣಗಳಿಂದ ಸಂಶೋಧನಾ ಕಾರ್ಯದ ಪ್ರಗತಿ ವರದಿ ಮತ್ತು ಶುಲ್ಕವನ್ನು ನಿಗಧಿತ ವೇಳೆಯಲ್ಲಿ ಸಲ್ಲಿಸದೇ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಅನುಮತಿ ಕೋರುವಂತಹ ಅಭ್ಯರ್ಥಿಗಳಿಗೆ ವಿಳಂಬ ಮನ್ನಾ ಮಾಡಿ ಅನುಮತಿ ನೀಡುವ ಸಂಬಂಧ ಈ ಕೆಳಗೆ ವಿಧಿಸಿರುವಂತೆ ನಿಗಧಿತ ಶುಲ್ಕಗಳೊಂದಿಗೆ ದಂಡಶುಲ್ಕವನ್ನು ವಿಧಿಸುವುದರ ಬಗ್ಗೆ ಸಿಂಡಿಕೇಟ್‌ನ ಅವಗಾಹನೆಗಾಗಿ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| 2017/9.6 | ವಿಶೇಷ ದಂಡಶುಲ್ಕಗಳನ್ನು ನಿಗಧಿಪಡಿಸುವ ಬಗ್ಗೆ. |
|---|---|
| ತೀರ್ಮಾನ : | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಸಂಶೋಧನೆಗೆ ನೊಂದಣಿ ಮಾಡಿಸಿ, ಸಂಶೋಧನೆಯಲ್ಲಿ, ನಿರತರಾಗಿರುವ ಕೆಲವು ಅಭ್ಯರ್ಥಿಗಳು ಅನಿವಾರ್ಯ ಕಾರಣಗಳಿಂದಾಗಿ ಸಂಶೋಧನಾ ಕಾರ್ಯದ ಪ್ರಗತಿ ವರದಿ ಮತ್ತು ಶುಲ್ಕವನ್ನು ನಿಗಧಿತ ವೇಳೆಯಲ್ಲಿ ಸಲ್ಲಿಸದೇ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಅನುಮತಿ ಕೋರುವಂತಹ ಅಭ್ಯರ್ಥಿಗಳಿಗೆ ವಿಳಂಬ ಮನ್ನಾ ಮಾಡಿ ಅನುಮತಿ ನೀಡುವ ಸಂಬಂಧ ನಿಗಧಿತ ಶುಲ್ಕಗಳೊಂದಿಗೆ ಈ ಕೆಳಗೆ ವಿಧಿಸಿರುವಂತೆ ದಂಡಶುಲ್ಕವವನ್ನು ವಿಧಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |

| ಕ್ರಸಂ. | ಅವಧಿ | ದಂಡಶುಲ್ಕ |
|---|---|---|
| 1 | 06 ತಿಂಗಳವರೆಗೆ | 1,000–00 |
| 2 | 06 ರಿಂದ 01 ವರ್ಷದವರೆಗೆ | 1,500–00 |
| 3 | 01 ವರ್ಷದಿಂದ 02 ವರ್ಷದವರೆಗೆ | 3,000–00 |
| 4 | 02 ವರ್ಷದಿಂದ 03 ವರ್ಷದವರೆಗೆ | 4,000–00 |
| 5 | 03 ವರ್ಷಕ್ಕೂ ಮೇಲ್ಪಟ್ಟು | 5,000–00 |
| 6 | ಕೋರ್ಸ್‌ವರ್ಕ್ ಪರೀಕ್ಷೆ ಫಲಿತಾಂಶ ಪ್ರಕಟಿಸಿದ ದಿನಾಂಕದಿಂದ 06 ತಿಂಗಳ ಒಳಗೆ ಖಾಯಂ ನೊಂದಣಿ ಮಾಡದಿರುವ ಪ್ರಕರಣಗಳಿಗೆ | 2,000–00 |
| 7 | ಐದು ವರ್ಷ ನಂತರ ಅವಧಿ ವಿಸ್ತರಣೆ ಕೋರುವ ಅಭ್ಯರ್ಥಿಗಳಿಗೆ ವಿಶೇಷ ದಂಡಶುಲ್ಕ | 2,000–00 |

ಉಪಕುಲಸಚಿವ (ಪ್ರಾಧಿಕಾರ)
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

12/10/17

## 2018 ರಿಂದ 2022ರ ವರೆಗಿನ ಆಂತರೀಕ ಅಂಕಗಳ ಸಂಬಂಧ ಪಾವತಿಸಿಕೊಂಡಿರುವ ದಂಡಶುಲ್ಕದ ವಿವರಗಳು.

| ಕ್ರ.ಸಂ | ಪದವಿಯ ಹೆಸರು | ವರ್ಷ | ರೂ |
|---|---|---|---|
| 1 | ಬಿ.ಕಾಂ | 2018-2019 | 7000-00 |
| | | 2019-2020 | 5320-00 |
| | | 2020-2021 | 3000-00 |
| | | 2021-2022 | 115600-00 |
| | | ಒಟ್ಟು ಮೊತ್ತ | 130920-00 |
| 2 | ಬಿ.ಬಿ.ಎ | 2018-2019 | 3000-00 |
| | | 2019-2020 | 500-00 |
| | | 2020-2021 | 1000-00 |
| | | 2021-2022 | 31000-00 |
| | | ಒಟ್ಟು ಮೊತ್ತ | 35500-00 |
| 3 | ಬಿ.ಎ. | 2018-2019 | Nill |
| | | 2019-2020 | Nill |
| | | 2020-2021 | 35960-00 |
| | | 2021-2022 | 209580-00 |
| | | ಒಟ್ಟು ಮೊತ್ತ | **245540-00** |
| 4 | ಬಿ.ಎಸ್ಸಿ | 2018-2019 | 4000-00 |
| | | 2019-2020 | 3500-00 |
| | | 2020-2021 | 12820-00 |
| | | 2021-2022 | 79100-00 |
| | | ಒಟ್ಟು ಮೊತ್ತ | 99420-00 |
| 5 | ಬಿಸಿಎ/ಕಾವ/ಬಿಎಸ್‌ಡಬ್ಲ್ಯೂ | 2018-2019 | 1000-00 |
| | | 2019-2020 | 500-00 |
| | | 2020-2021 | 500-00 |
| | | 2021-2022 | |
| | | ಒಟ್ಟು ಮೊತ್ತ | 2000-00 |
| | | **Grand Total Rs.** | 5,13,380-00 |

Registrar (Evaluation)
University of Mysore
MYSORE

2018 ರಿಂದ 2022 ವರೆಗಿನ ಆಂತರಿಕ ಅಂಕಗಳ ಸಂಬಂಧ ಪಾವತಸಿಕೊಂಡಿರುವ ದಂಡಶುಲ್ಕದ ವಿವರಗಳು: (ಸ್ನಾತಕೋತ್ತರ)

| ಕ್ರಮ ಸಂಖ್ಯೆ | ವರ್ಷ | ರೂ. |
|---|---|---|
| 1. | 2018–19 | 31,000–00 |
| 2. | 2019–20 | 15,500–00 |
| 3 | 2020–21 | 21,000–00 |
| 4. | 2021–22 | 5,500–00 |
| | ಒಟ್ಟು ಮೊತ್ತ | **73,000–00** |

K.N. [signature] 6/1/23
Registrar (Evaluation)
University of Mysore
Mysore-570 005

ದಿನಾಂಕ:23-03-2020 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಮೌಲ್ಯಮಾಪನ ಸಂಧರ್ಭದಲ್ಲಿ ತಪ್ಪು ಮಾಡಿದ ಮೌಲ್ಯಮಾಪಕರಿಗೆ ಪ್ರತಿ ತಪ್ಪಿಗೆ ರೂ.1000/-ದಂಡ ವಿಧಿಸಲಾಗಿರುತ್ತದೆ. ಇದರ ಅನುಸಾರ ಜಮಾವಾಗಿರುವ ದಂಡಶುಲ್ಕದ ವಿವರಗಳು ಕೆಳಕಂಡಂತಿದೆ.

| ಕ್ರಮ.ಸಂಖ್ಯೆ | ವರ್ಷ | ರೂ |
|---|---|---|
| 01 | 2021-2022 | 2,64,000-00 |
| 02 | 2022-2023 | 52,000-00 |
| | ಒಟ್ಟು ಮೊತ್ತ | 3,16,000-00 |

K.N. [signature]
Registrar (Evaluation
University of Mysore
Mysore-570 005